

# ಕಾಯದ ಕಾರಣ ಕ್ರೌರ್ಯದ ಹೂರಣ

ಬಾಡಿ ಶೇಮಿಂಗ್‌ನ ಸೂಕ್ಷ್ಮ ಎಳೆ ಇಟ್ಟುಕೊಂಡು ಅದಕ್ಕೆ ಜನಪ್ರಿಯ ಮಾದರಿಯ ಹಾರರ್ ಅಂತ್ಯವನ್ನು ಬೆಸೆದಿರುವ ವಿಶಿಷ್ಟ ಕಿರುಚಿತ್ರ 'ಸೆರ್ಡಿಟಾ'.

■ ಗೌರಿ

'ಬಾಡಿ ಶೇಮಿಂಗ್' ಎನ್ನುವ ಪಿಡುಗಿಗೆ ಜಗತ್ತಿನ ಎಲ್ಲ ದೇಶ, ನಾಗರಿಕತೆಗಳಲ್ಲಿಯೂ ಬಲಿಯಾಗುವವರಲ್ಲಿ ಹೆಣ್ಣುಮಕ್ಕಳೇ ಹೆಚ್ಚು. ಡುಮ್ಮ, ಡುಮ್ಮಿ, ಲಡ್ಡು, ಬಲೂನು, ಮೂಟೆ – ಹೀಗೆ ಹಲವು ನಿಕ್‌ನೇಮಿನ ಮೂಲದಲ್ಲಿ ಇರುವುದೂ ಬಾಡಿ ಶೇಮಿಂಗ್‌ನ ಕ್ರೌರ್ಯವೇ.

ಸಿನಿಮಾದಲ್ಲಿಯಂತೂ ದೇಹವನ್ನು ಬಳಸಿಕೊಂಡು ಮಾಡುವ ಹಾಸ್ಯದ ದೊಡ್ಡ ಕೊಚ್ಚೆಗುಂಡಿಯೇ ಇದೆ. ಇದನ್ನು ಮನರಂಜನೆಯ ಹೆಸರಲ್ಲಿ ಬಿಕರಿಗೂ ಇಡಲಾಗುತ್ತದೆ. ಆದರೆ ಈ ಜನಪ್ರಿಯ ಮಾದರಿಯನ್ನು ಪ್ರಶ್ನಿಸುವ, ಇದಕ್ಕೆ ವಿರುದ್ಧವಾದ ಮಾನವೀಯ ಸಂವೇದನೆಯನ್ನು ನಮಗೆ ನೆನಪಿಸುವ ಪ್ರಯತ್ನಗಳು ವಿರಳವಾದರೂ ನಡೆದಿವೆ. ಅಂಥದ್ದೇ ಒಂದು ಪ್ರಯತ್ನವನ್ನು 'ಸೆರ್ಡಿಟಾ' ಎಂಬ ಕಿರುಚಿತ್ರದಲ್ಲಿ ಕೆರ್ಲೋಟಾ ಪೆರೆಡಾ ಮಾಡಿದ್ದಾರೆ.

ಬಾಡಿ ಶೇಮಿಂಗ್ ಕುರಿತು ಹೃದಯ ಕರಗಿಸುವ ಮತ್ತು ಅದರ ಕ್ರೌರ್ಯಗಳನ್ನು ಕಾಣಿಸಿ ಮುಗಿಯುವ ಕಥೆಯ ಹಾಗೆಯೇ ಈ ಕಿರುಚಿತ್ರ ಶುರುವಾಗುತ್ತದೆ. ಆದರೆ ಅಷ್ಟರಲ್ಲಿಯೇ ಇದು ಕೊನೆಗೊಳ್ಳುವುದಿಲ್ಲ. ಹಾಗಾಗಿಯೇ ಇದು ಬರೀ ಬಾಡಿ ಶೇಮಿಂಗ್ ಕುರಿತಾದ ಕಿರುಚಿತ್ರವಾಗಿಯಷ್ಟೇ ಉಳಿಯುವುದಿಲ್ಲ.

ಮುಂಜಾನೆಯ ಹೊತ್ತಲ್ಲಿ ವಾಕಿಂಗ್‌ಗೆಂದು ಬಂದಿರುವ ಸಾರಾಗೆ ನಿರ್ಜನ ಸ್ವಿಮ್ಮಿಂಗ್ ಪೂಲ್ ನೋಡಿದ್ದೇ ಸ್ವಿಮ್ ಮಾಡುವ ಆಸೆಯಾಗುತ್ತದೆ. ಬಟ್ಟೆಗಳನ್ನು ಕಳಚಿ, ಸ್ವಿಮ್ ಡ್ರೆಸ್‌ನಲ್ಲಿ ಸ್ವಿಮ್ಮಿಂಗ್ ಪೂಲ್‌ಗೆ ಇಳಿಯಬೇಕು ಅಂದುಕೊಳ್ಳುವಷ್ಟರಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಒಬ್ಬ ಗಂಡಸು ಇರುವುದು ಕಾಣಿಸುತ್ತದೆ. ಒಮ್ಮೆ ಅಂಜಿ ಮತ್ತೊಂದು ಬದಿಯಿಂದ ಸ್ವಿಮ್ಮಿಂಗ್ ಪೂಲ್ ಇಳಿಯಲು ಹವಣಿಸುವಷ್ಟರಲ್ಲಿ ಅವಳಿಗೆ ಪರಿಚಯ ಇರುವ ಮೂವರು ಹುಡುಗಿಯರು ಅಲ್ಲಿಗೆ ಬರುತ್ತಾಳೆ. ಅವರೆಲ್ಲರೂ ಸಾರಾಳನ್ನು ಕರೆಯುವುದು 'ಸೆರ್ಡಿಟಾ' ಎಂದೇ (ಸೆರ್ಡಿಟಾ ಎಂದರೆ ಸ್ಪ್ಯಾನಿಷ್ ಭಾಷೆಯಲ್ಲಿ ಹಂದಿ ಎಂದು ಅರ್ಥ). ಇವಳನ್ನು ನೋಡಿ ಅವರೆಲ್ಲರೂ ಗೇಲಿ ಮಾಡುತ್ತಾರೆ. ಬಲೆಯಲ್ಲಿ, ನೀರಿಗಿಳಿದ ಸಾರಾಳ ತಲೆಯೊತ್ತಿ ಮುಳುಗಿಸಿ ಹಿಂಸೆ ನೀಡುತ್ತಾರೆ. ಸಾರಾ ಪೂಲ್‌ಗೆ ಇಳಿದಿದ್ದೇ ಅದರಲ್ಲಿದ್ದ ಗಂಡಸು ಎದ್ದು ಹೊರಡುತ್ತಾನೆ. ಸಾರಾ ಪೂಲ್‌ನಿಂದ ಮೇಲೆದ್ದು ಬರುವಷ್ಟರಲ್ಲಿ ಆ ಹುಡುಗಿಯರು ಅವಳ ಬಟ್ಟೆಗಳನ್ನೆಲ್ಲ ಎತ್ತಿಕೊಂಡು ಓಡಿಹೋಗುತ್ತಾರೆ. ಸ್ವಿಮ್ ಡ್ರೆಸ್‌ನಲ್ಲಿಯೇ ರಸ್ತೆಯಲ್ಲಿ ಓಡಿಕೊಂಡು ಮನೆಗೆ ಹೋಗಬೇಕಾಗುತ್ತದೆ ಸಾರಾ.

ಹೆಣ್ಣೊಬ್ಬಳ ದೇಹಾಕಾರ ಹೇಗೆ ಸಮಾಜದಲ್ಲಿ ಅವಳ ಸ್ಥಾನವನ್ನೂ ನಿರ್ಧರಿಸುತ್ತದೆ ಎಂಬುದನ್ನು ನಿರ್ದೇಶಕಿ ಬಹುಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಹಾಗೆಯೇ ನಾಗರಿಕ ಸಮಾಜ ಒಂದು ಜೀವದ ಮೇಲೆ ಹೇಗೆ ಅಕಾರಣ ಕ್ರೌರ್ಯ ಮೆರೆಯಬಲ್ಲದು ಎಂಬುದನ್ನೂ ತೋರಿಸಿದ್ದಾರೆ. ಆದರೆ ಇಲ್ಲಿಗೇ ಅವರು ನಿಲ್ಲುವುದಿಲ್ಲ. ಈ ಸೂಕ್ಷ್ಮ ಕಥನದ ಎಳೆಗೆ ಒಂದು ಹಾರರ್ ಅಂತ್ಯವನ್ನು ಅವರು ಕೊಟ್ಟಿದ್ದಾರೆ. ಜನಪ್ರಿಯ ಮಾದರಿಯಲ್ಲಿ ವಿಲನ್‌ಗಳು ಕೊನೆಗೆ ದುರ್ಗತಿ ಸಾಧಿಸುವ ಸೂತ್ರವನ್ನು ಇಲ್ಲಿ ಬಳಸಿಕೊಂಡಿರುವ ಬಗೆ ಕುತೂಹಲಕಾರಿಯಾಗಿದೆ. ಆ ಕಾರಣಕ್ಕೇ ಈ ಕಿರುಚಿತ್ರ ಬೆಚ್ಚಿ ಬೀಳಿಸುತ್ತದೆ. ನೆನಪಿನಲ್ಲಿಯೂ ಉಳಿಯುತ್ತದೆ.

ತಾಂತ್ರಿಕವಾಗಿಯೂ ಈ ಕಿರುಚಿತ್ರ ಗಟ್ಟಿಯಾಗಿದೆ. ಧ್ವನಿ ವಿನ್ಯಾಸದ ಮೂಲಕವೇ ಮೂಡ್ ಅನ್ನು ಕಟ್ಟಿಕೊಟ್ಟಿರುವ ರೀತಿ ಚೆನ್ನಾಗಿದೆ. ಒಂದೂ ಮಾತಾಡದ ಸಾರಾ ಪಾತ್ರಧಾರಿ ಮುಖದಲ್ಲಿಯೇ ಹಂಬಲ, ಹಿಂಜರಿಕೆ, ನಾಚಿಕೆ, ಅವಮಾನ, ಭಯ ಎಲ್ಲವನ್ನೂ ವ್ಯಕ್ತಪಡಿಸಿದ್ದಾರೆ. ಒಮ್ಮೆ ನೋಡಿ ಬಹುಕಾಲ ನೆನಪಿಟ್ಟುಕೊಳ್ಳುವ ಕಿರುಚಿತ್ರವಿದು.



ಹೆಸರು: ಸೆರ್ಡಿಟಾ
ನಿರ್ದೇಶನ: ಕೆರ್ಲೋಟಾ ಪೆರೆಡಾ
ನಿರ್ಮಾಣ: ಮೇರಿಯೊ ಮೆಡೌನೊ
ಛಾಯಾಗ್ರಹಣ: ರೀಟಾ ನೋರಿಯೇಗಾ
ಸಂಗೀತ: ನಾಚೋ ಅರೆನಾಸ್
ಸಂಕಲನ: ಡೇವಿಡ್ ಪೆಲೆಗ್ರೀನ್
ತಾರಾಗಣ: ಲೌರಾ ಗಲಾನ್, ಪ್ಯಾಕೊ ಹಿಡಾಲ್ಗೋ, ಎಲಿಜಬೆತ್ ಕ್ಯಾಸಾನೋವಾಸ್

ಈ ಕಿರುಚಿತ್ರ ವೀಕ್ಷಣೆಗೆ bit.ly/38xG2HG ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.